ಹಳ್ಳಿಗಾಡಿನಲ್ಲೂ ಭಯದ ವಾತಾವರಣವನ್ನು ನಿರ್ಮಾಣ ಮಾಡಿದೆ' ಅವನ ಮಾತುಗಳನ್ನು ಅನುಮೋದಿಸಿದ್ದೆ. ಗಾಂಧಿ, ಮಾರ್ಕ್ಸ್ ಡಿಗ್ರಿ ತರಗತಿಗಳಲ್ಲಿಯೇ ನನ್ನ ಮೇಲೆ ಅಪಾರ ಪ್ರಮಾಣದಲ್ಲಿ ಪ್ರಭಾವವನ್ನು ಬೀರಿದ್ದರಿಂದಲೇ ನಾನು ಸ್ನಾತಕೋತ್ತರ ಅರ್ಥಶಾಸ್ತ್ರ ಪದವಿಯನ್ನು ಓದಲು ಆಯ್ಕೆ ಮಾಡಿಕೊಂಡಿದ್ದು ಕೂಡ. ಮಾರ್ಕ್ಸ್ ನ ಸಮಾನತೆ ಮತ್ತು ಗಾಂಧಿಯ ಸರಳ ಆರ್ಥಿಕ ಚಿಂತನೆಗಳು ಹಳ್ಳಿಗಾಡಿನ ವಿದ್ಯಾರ್ಥಿಗಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದವು. ಹಾಗಾಗಿ ಯಾವುದೇ ಚಳವಳಿ ಮತ್ತು ಹೋರಾಟಗಳಲ್ಲಿ ಗ್ರಾಮಾಂತರ ವಿದ್ಯಾರ್ಥಿಗಳೇ ಮುಂದಿರುತ್ತಿದ್ದರು. ಅಂಥ ಒಂದು ದಿನ ಗೋವಿಂದ ವೆಂಕಟರಮಣ ಹೆಗಡೆ ಸಿಟಿಗೆ ಹೋಗಿಬರುತ್ತೇನೆಂದು ಹೇಳಿ ಹೋಗಿದ್ದವನು. ರಾತ್ರಿ ಎಷ್ಟು ಹೊತ್ತಾದರೂ ಬಂದಿರಲಿಲ್ಲ. ನಾನು ರೂಮಿನ ಬಾಗಿಲನ್ನು ಮುಂದಕ್ಕಿಟ್ಟು ಲೈಟ್ ಆಫ್ ಮಾಡಿ ಮಲಗಿದ್ದೆ. ಒಂದೊತ್ತಿನಲ್ಲಿ ಯಾರೋ ಕೋಲಿನಿಂದ ತಿವಿದಂತಾಗಿ ಪಕ್ಕನೆ ಎಚ್ಚರವಾಗಿತ್ತು. ಕಣ್ಣುಜ್ಜಿಕೊಂಡು ಹಾಸಿಗೆಯ ಮೇಲೆ ಕುಳಿತವನಿಗೆ ರೂಮಿನಲ್ಲಿ ಬಿಳಿ ಬಟ್ಟೆ ಧರಿಸಿದ ಮೂವರು ಧಾಂಡಿಗರು ನಿಂತಿರುವುದು ಕಣ್ಣಿಗೆ ಬಿದ್ದಿತ್ತು. ಸಮಯ ಹತ್ತಿರ ಹತ್ತಿರ ಒಂದು ಗಂಟೆಯಾಗಿತ್ತು. ಅವರಲ್ಲೊಬ್ಬನ ಕೈಯಲ್ಲಿ ಲಾಟಿಯಿತ್ತು. ಇಬ್ಬರು ಹೆಗಡೆಯ ಬ್ಯಾಗ್ ಮತ್ತು ಅಲ್ಮೆರಾವನ್ನು ತಲಾಶ್ ಮಾಡುತ್ತಿದ್ದರು. ಮಾರ್ಕ್ಸ್, ಏಂಜೆಲ್ಸ್, ಲೋಹಿಯಾ, ಭಗತ್ ಸಿಂಗ್, ಕ್ಯಾಸ್ಟ್ರೊ ಮುಂತಾದವರ ಪುಸ್ತಕಗಳಲ್ಲದೆ ಎಮರ್ಜೆನ್ಸಿ ವಿರೋಧಿ ಸಾಹಿತ್ಯದ ಹಾಳೆಗಳು ಅವನ ಬ್ಯಾಗ್ ಮತ್ತು ಅಲ್ಮೆರಾವನ್ನು ತುಂಬಿದ್ದವು. ನಂತರ ನನ್ನ ಬ್ಯಾಗ್ ಮತ್ತು ಅಲ್ಮೆರಾವನ್ನೂ ತಡಕಾಡಿದ್ದರು. ನನ್ನ ಅಲ್ಮರಾದಲ್ಲೂ ಸಿಲೆಬಸ್ ಪುಸ್ತಕಗಳ ಜೊತೆಗೆ ಎಮರ್ಜೆನ್ಸಿ ವಿರೋಧಿ ಪಾಂಪ್ಲೇಟ್ ಗಳು ಸಿಕ್ಕಿದ್ದವು. ಹೆಗಡೆ ಕೊಟ್ಟಿದ್ದ ಆ ಪಾಂಪ್ಲೇಟ್ ಗಳನ್ನು ನನ್ನ ಅಲ್ಮೆರಾದಲ್ಲಿ ಇಟ್ಟಿದ್ದೆ. ಅವರು ಮಫ್ತಿಯಲ್ಲಿರುವ ಪೊಲೀಸರೆಂಬುದು ನನಗೆ ಖಾತ್ರಿಯಾಗಿತ್ತು. ಕೈಕಾಲುಗಳಲ್ಲಿ ನಡುಕ ಹುಟ್ಟುವುದರೊಂದಿಗೆ ಮೈ ಬೆವೆತು ಹೋಗಿತ್ತು. 'ನನ್ಮಕ್ಳು ಐನಾತಿ ಕ್ರಾಂತಿಕಾರಿಗಳೇ ಅನ್ನೋದರಲ್ಲಿ ಅನುಮಾನ ಇಲ್ಲ. ಇವನನ್ನೂ ಜೀಪ್ ಹತ್ತಿಸಿಕೊಂಡು ಸ್ಟೇಷನ್ ಗೆ ಹೋಗೋಣ' ಎಂದು ಲಾಟಿ ಹಿಡಿದಿದ್ದ ವ್ಯಕ್ತಿ ಹೇಳಿದ್ದ. ಬಹುಶಃ ಆತ ಇನ್‌ಸ್ಪೆಕ್ಟರ್ ಇರಬೇಕೆಂಬ ನನ್ನ ಗುಮಾನಿ ನಿಜವೇ ಆಗಿತ್ತು. ಪುಸ್ತಕ, ಪಾಂಪ್ಲೇಟ್ ಗಳನ್ನು ಬ್ಯಾಗೊಂದಕ್ಕೆ ತುಂಬಿಕೊಂಡು ನನಗೆ ಬಟ್ಟೆ ಹಾಕಿಸಿಕೊಂಡು ಜೀಪು ಹತ್ತಿಸಿಕೊಂಡಿದ್ದರು. ಸಿಟಿಯ ಯಾವುದೋ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದಾಗ ರಾತ್ರಿ ಎರಡೂವರೆ ಗಂಟೆಯಾಗಿತ್ತು. ಪೊಲೀಸ್ ಠಾಣೆಯ ಸೆಲ್‌ನಲ್ಲಿ ಹೆಗಡೆ ಸಮೇತ ಇನ್ನಿಬ್ಬರು ಕುಳಿತಿರುವುದು ಕಾಣಿಸಿತು. ಅವರೊಂದಿಗೆ ನನ್ನನ್ನು ಸೇರಿಸಿದ್ದರು.

ಮೈಸೂರ್ ಬ್ಯಾಂಕ್ ಹತ್ತಿರ ರಾತ್ರಿ ಎಂಟೂವರೆ ಗಂಟೆಯಲ್ಲಿ ಗೋಡೆಯ ಮೇಲೆ 'ಸರ್ವಾಧಿಕಾರಕ್ಕೆ ಧಿಕ್ಕಾರ', 'ದೇಶದ ಸ್ವಾತಂತ್ರ್ಯಕ್ಕೆ ಮತ್ತೊಮ್ಮೆ ಹೋರಾಡಬೇಕಿದೆ', 'ಪ್ರಜಾಪ್ರಭುತ್ವ ಕೊಲೆ ಮಾಡಿದವರು ದೇಶವನ್ನಾಳಲು ಅರ್ಹರಲ್ಲ', 'ಸರ್ವಾಧಿಕಾರದ ವಿರುದ್ಧ ದಂಗೆ ಏಳಿ' ಮುಂತಾದ ಬರಹಗಳನ್ನು ಬರೆಯುವಾಗ ಜಿ.ವಿ. ಹೆಗಡೆ ಮತ್ತವನ ಇಬ್ಬರು ಸ್ನೇಹಿತರು ಪೊಲೀಸರಿಗೆ ಸಿಕ್ಕಿಬಿದ್ದಿದ್ದರಂತೆ. ನನ್ನನ್ನು ನೋಡಿ ಶುಷ್ಕ ನಗೆಯನ್ನು ಮುಖ ತುಂಬಿಸಿಕೊಂಡು, 'ನಾನು ಎಷ್ಟು ಹೇಳಿದರೂ ಕೇಳದೆ ಹಾಸ್ಟೆಲಿಗೆ ಬಂದು ನಿನ್ನನ್ನು ಕರೆದುಕೊಂಡು ಬಂದಿದಾರೆ. ನಿನ್ನದೇನೂ ಪಾತ್ರ ಇಲ್ಲವೆಂದು ಹೇಳಿದರೂ ಕೇಳಲಿಲ್ಲ. ಈ ಪೊಲೀಸರು ರಾಜಕಾರಣಿಗಳು ಸಾಕಿದ ಗೂಂಡಾಗಳೇ ಸರಿ. ಒಂಬತ್ತು ಗಂಟೆಗೆ ಮೂವರಿಗೂ ಒಂದೊಂದು ತಂಗಳು ಇಡ್ಲಿಯನ್ನು ನಾಯಿಗಳಿಗೆ ಎಸೆದಂತೆ ಎಸೆದರು. ಹೊಟ್ಟೆಯಲ್ಲಿ ಸಂಕಟ ಶುರುವಾಗಿದೆ. ನೀರು ಬೇಕೆಂದರೆ ಅಳೆದುತೂಗಿ ಅರ್ಧರ್ಧ ಗ್ಲಾಸ್ ಕೊಡ್ತಿದ್ದಾರೆ. ನಾಳೆ ನಾಡಿದ್ದು ಡಿಸಿಪಿ ಬರ್ತಾನಂತೆ. ಅವನು ವಿಚಾರಣೆ ಮುಗಿಸಿದ ಮೇಲೆ ಮುಂದಿನ ಕ್ರಮ ಜರುಗಿಸ್ತಾರಂತೆ. ಇದೆಲ್ಲಾ ನೋಡ್ತಾ ಇದ್ರೆ ರಾಬಿಸ್ಪಿಯರ್ ನೆನಪಾಗ್ತಿದಾನೆ. ಫ್ರಾನ್ಸ್ ಕ್ರಾಂತಿಯಲ್ಲಿ ರಾಜಮನೆತನದವರನ್ನು ಗಿಲೆಟಿನ್ ಯಂತ್ರಕ್ಕೆ ನೂಕಿದಂತೆ ಇವರನ್ನೂ ನೂಕಬೇಕೆನಿಸುತ್ತಿದೆ. ಡೆಮೊಕ್ರಸಿಗೆ ಗೆದ್ದಲು ಹಿಡಿಯುತ್ತಿದೆ' ಎಂದು ಮೆಲ್ಲಗೆ ಹೇಳಿದ್ದ. ಸೆಲ್ ನಲ್ಲಿ ಸೊಳ್ಳೆಗಳು ಗುಂಯ್ಗುಟ್ಟುವ ಸದ್ದಿನೊಂದಿಗೆ ಮೂರ್ನಾಲ್ಕು ಸೊಳ್ಳೆಗಳು ಕಚ್ಚಿ ಕೈಕಾಲು ಕೆರೆದುಕೊಂಡಿದ್ದೆ. ಜಿ.ವಿ. ಹೆಗಡೆಯ ಜೊತೆಗೆ ಅರೆಸ್ಟ್ ಆಗಿದ್ದ ಇನ್ನಿಬ್ಬರಲ್ಲಿ ಒಬ್ಬನ ಹೆಸರು ಪ್ರಮೋದ್ ಶಾಸ್ತ್ರಿ, ಎಂ.ಎ. ಪೊಲಿಟಿಕಲ್